ಶ್ರೀ ಯು.ಟಿ. ಫರೀದ್ :- ಶೂನ್ಯವೇಳೆಯಲ್ಲಿ ನನ್ನದೊಂದು ಪ್ರಸ್ತಾಪವಿದೆ.

ಉಪಾಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ. ನಂತರ ನಾನು ಕರೆಯುತ್ತೇನೆ. ಸೋಮಣ್ಣನವರೇ, ಈಗ ನೀವು ಪ್ರಾರಂಭ ಮಾಡಿ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ನೀಡಿರತಕ್ಕಂತಹ ಕೆಲವು ಶಿಫಾರಸ್ಸುಗಳನ್ನು ಜಾರಿಗೊಳಿಸುವುದು

ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) :- ಸನ್ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾನು ಒಂದು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸಂಬಂಧಿಸಿದಂತೆ ಈಗ ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಕೆಲವು ಅಂಶಗಳಿಗೆ ಬೇಕಾದ ಉತ್ತರವನ್ನು ಕೇಳಿದ್ದೆ. ದಯಮಾಡಿ ಅವರು ಆ ಬಗ್ಗೆ ತಮ್ಮ ಭಾವನೆಯನ್ನು ವ್ಯಕ್ತಪಡಿಸಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ನೀಡಿರತಕ್ಕಂಥ ಕೆಲವು ಶಿಫಾರಸ್ಸುಗಳನ್ನು ನೀವು ಯಾವ ರೀತಿ ಜಾರಿಗೊಳಿಸುತ್ತೀರಿ ಎನ್ನುವ ಮಾತನ್ನು ಕೇಳಿದ್ದೇನೆ. ಇತ್ತೀಚಿನ ದಿನಗಳಲ್ಲಿ ರಾಷ್ಟ್ರದಲ್ಲಿ ನಾವು ಗ್ಲೋಬಲೈಸೇಷನ್ ಮತ್ತು ಲಿಬರಲೈಸೇಷನ್‌ಗಳನ್ನು ಯಥೇಚ್ಛವಾಗಿ ಮಾಡತಕ್ಕಂಥ ಈ ಸಂದರ್ಬದಲ್ಲಿ ಕನ್ನಡ ಮಾಧ್ಯಮದಲ್ಲಿ ಓದತಕ್ಕಂಥ ಮಕ್ಕಳಿಗೆ ಯಾವುದೇ ಒಂದು ಸಂಸ್ಥೆಯಲ್ಲಿ ಕೆಲಸ ಸಿಗದೇ ಅವರ ತೊಳಲಾಟ ಹೇಳಲು ಸಾಧ್ಯವಿಲ್ಲ. 2000ದ ಇಸವಿಯಲ್ಲಿ, ರಾಷ್ಟ್ರೀಯ ಶಾಲಾ ಶಿಕ್ಷಣ ಪಠ್ಯಕ್ರಮದನ್ವಯ ಪ್ರಾಥಮಿಕ ಹಂತದಲ್ಲಿ ಬೋಧನಾ ಮಧ್ಯಮವು ಮಾತೃ ಭಾಷೆ ಅಥವಾ ಪ್ರಾಂತೀಯ ಭಾಷೆಯಾಗಿರಬೇಕು ಎನ್ನುವ ಬಗ್ಗೆ ದೃಷ್ಟಿಕೋನವನ್ನು ಹರಿಸಲಾಗಿತ್ತು. ಇದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಇದಲ್ಲದೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ನೀಡಿರತಕ್ಕಂಥ ಕೆಲವು ಶಿಫಾರಸ್ಸುಗಳನ್ನು ಜಾರಿಗೆ ತರತಕ್ಕಂಥ ಸಂದರ್ಭದಲ್ಲಿ, ಆ ಬಗ್ಗೆ ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಚರ್ಚೆಯಾಗಿದೆಯೇ ? ಇಂಥ ವಿಚಾರಗಳನ್ನು ಶಿಫಾರಸ್ಸು ಮಾಡುವಾಗ ಪೋಷಕರನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆಯೇ ? ಅದರಿಂದ ಆಗತಕ್ಕಂಥ ಸಾಧಕ ಬಾಧಕಗಳನ್ನು ಚರ್ಚೆ ಮಾಡಿ, ಅದಕ್ಕೆ ಒಂದು ಸರಿಯಾದ ರೂಪವನ್ನು ಕೊಡತಕ್ಕಂಥಾದ್ದು ಆಗಿದೆಯೇ ? ಇದು ಕೇವಲ ಇವತ್ತಿನ ಪರಿಸ್ಥಿತಿಯಲ್ಲ. ಸುಮಾರು ವರ್ಷಗಳಿಂದ ಈ ಗೊಂದಲಮಯವಾದ ವ್ಯವಸ್ಥೆ ಇದೆ. ಇದೊಂದು ಸೂಕ್ಷ್ಮವಾದ ವಿಚಾರ. ಮಾನ್ಯ ಸಚಿವರು ಇದರ ಬಗ್ಗೆ ವಿವರಣೆ ನೀಡಬೇಕು. ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಮೂರನೇ ತರಗತಿಯಿಂದ ಇಂಗ್ಲೀಷ್ ಭಾಷೆ ಕಲಿಕೆ - ಸರ್ಕಾರದ ಒಪ್ಪಿಗೆ ಎಂದು. ಈ ವಿಚಾರವನ್ನು ಮಾನ್ಯ ಸಚಿವರು ನಿನ್ನೆ ಸದನದಲ್ಲಿ ಹೇಳಲಿಲ್ಲ. ಅವರು ಪತ್ರಿಕೆಗಳಿಗೆ ಮೌಖಿಕವಾಗಿ ತಿಳಿಸಿದ್ದಾರೇನೋ ಗೊತ್ತಿಲ್ಲ. ಹಾಗೆಂದು ಪತ್ರಿಕೆಗಳಲ್ಲಿ ಬಂದಿದೆ. ಇದು ನಿಜವೇ ? ನಾನು ತಮ್ಮಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತಿದ್ದೇನೆ, ನಾನು ಈಗಾಗಲೇ ಪ್ರಸ್ತಾಪ ಮಾಡಿದ ವಿಚಾರಗಳು ಸೂಕ್ಷ್ಮವಾದವುಗಳಾಗಿರು ವುದರಿಂದ ಇದರ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈ ಬಗ್ಗೆ ಸರ್ಕಾರದ ಕಾರ್ಯಕ್ರಮ ಗಳೇನು ? ಸರ್ಕಾರ ಮುಂದಿನ ದಿನಗಳಲ್ಲಿ ಈ ಶಿಫಾರಸ್ಸುಗಳನ್ನು ತೀರ್ಮಾನ ಮಾಡುವ ಮುಂಚೆ ಯಾರಯಾರ ಭಾವನೆಗಳಿಗೆ ಸ್ಪಂದಿಸುತ್ತದೆ ಮತ್ತು ಇತ್ತೀಚಿನ ದಿನಗಳಲ್ಲಿ ಕನ್ನಡವನ್ನು ಕಲಿಯತಕ್ಕಂಥವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರತಕ್ಕಂಥ ಅನಾನುಕೂಲಗಳ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ, ಪ್ರೌಢ ಶಿಕ್ಷಣ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ನಿನ್ನೆ 3-4- ಪ್ರಶ್ನೆಗಳನ್ನು ಎತ್ತಿ ನನ್ನ ಸ್ಪಷ್ಟೀಕರಣ ಕೇಳಿದರು. ಇವತ್ತು ಒಂದು ಪ್ರಶ್ನೆಯನ್ನು ಪುನರುಚ್ಚಾರ ಮಾಡಿದ್ದಾರೆ. ಮೊದಲನೆಯಾದಗಿ, ಮೂಲನೇ ತರಗತಿಯಿಂದ ಇಂಗ್ಲೀಷ್ ಪಾಠ ಹೇಳಬೇಕು ಎಂದು ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರು. ಇದು ಲಿಖಿತ ಉತ್ತರದಲ್ಲಿ ಇದೆ. ಅದರಲ್ಲೇನೂ ತಪ್ಪಿಲ್ಲ. ಆದರೆ ಲಿಖಿತ ಉತ್ತರದಲ್ಲಿ ಏನು ಸೇರಿಸಬೇಕೋ ಅದನ್ನು ಸೇರಿಸಿಲ್ಲ. ನಾನು ಆರೇಳು ಸಲ ಮಾಧ್ಯಮದವರಿಗೆ ಸ್ಪಷ್ಟೀಕರಣ ಕೊಟ್ಟಿದ್ದೆ. ಅದೇನೆಂದರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು, ಇಂಗ್ಲೀಷೇತರ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕಡ್ಡಾಯವಾಗಿ ಇಂಗ್ಲೀಷ್ ಪಾಠವನ್ನು ಹೇಳಿಸಬೇಕು ಎಂದು ಶಿಫಾರಸ್ಸು ಮಾಡಿದ್ದರು. ಅದರ ಜೊತೆ ಜೊತೆಗೆ, ಕನ್ನಡೇತರ ಶಾಲೆಗಳಲ್ಲಿ ಕನ್ನಡವನ್ನೂ ಕೂಡ ಕಡ್ಡಾಯವಾಗಿ ಪಾಠಮಾಡಬೇಕು ಎನ್ನುವುದನ್ನೂ ಹೇಳಿದ್ದರು. ಇವೆರಡೂ ಕಡ್ಡಾಯವೇ ಅದನ್ನೂ ಇಲ್ಲಿ ನಮೂದಿಸಬಹುದಾಗಿತ್ತು. ಕನ್ನಡೇತರ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು ಎನ್ನುವುದು ತಾತ್ವಿಕವಾಗಿ ಒಪ್ಪಿಕೊಂಡಿರುವುದಾಗಿದೆ. ಮೇಲೆ ಹೇಳಿದ ಎರಡೂ ಸಹ ಮುಖ್ಯಮಂತ್ರಿಗಳ ಸಭೆಯಲ್ಲಿ ಒಪ್ಪಿಕೊಂಡಿರುವಂಥವುಗಳಾಗಿವೆ. ಆದರೆ, ಯಾವ ಕಾರಣಕ್ಕಾಗಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು ಎನ್ನುವುದನ್ನು ಇಲ್ಲಿ ನಮೂದಿಸಿಲ್ಲ ಎಂದರೆ, ಹೈಕೋರ್ಟಿನಿಂದ ಒಂದು ತಡೆಯಾಜ್ಞೆ ಬಂದಿದೆ. ಕನ್ನಡವನ್ನು ಕಡ್ಡಾಯ ಮಾಡಬೇಕು ಎಂದು ನಾವು ಹೊರಡಿಸಿದ ಆದೇಶಕ್ಕೆ ನೇರವಾಗಿ, ಅದರ ವಿರುದ್ಧ ತಡೆಯಾಜ್ಞೆ ತಂದಿದ್ದರಿಂದ ಅದನ್ನು ಉತ್ತರದಲ್ಲಿ ಹೇಳಿಲ್ಲ. ಆದರೂ ಕೂಡ ಅದನ್ನು ಇಲ್ಲಿ ಹೇಳಬಹುದಿತ್ತು ಎಂದು ನನಗನ್ನಿಸುತ್ತದೆ. ಹೇಳುವುದರಲ್ಲಿ ತಪ್ಪೇನೂ ಇಲ್ಲ. ಈಗ ಪುನಃ ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ ಮತ್ತು ಮಾಧ್ಯಮಗಳ ಮೂಲಕ ಜನರಿಗೂ ಗೊತ್ತಾಗಲಿ, ಇವೆರಡೂ ಕೂಡ ಕಡ್ಡಾಯವಾಗಿ ಇರಬೇಕು ಎಂದು ಮಾಡಿರತಕ್ಕಂಥಾದ್ದು. ಇಂಗ್ಲೀಷೇತರ ಶಾಲೆಗಳಲ್ಲಿ ಇಂಗ್ಲೀಷನ್ನು ಮತ್ತು ಕನ್ನಡೇತರ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಮೂರನೇ ತರಗತಿಯಿಂದ ಹೇಳಬೇಕು ಎನ್ನುವುದಕ್ಕೆ ತಾತ್ವಿಕವಾಗಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ 4-1-2001 ರಂದು ನಡೆದ ಸಭೆಯಲ್ಲಿ ಒಪ್ಪಿಗೆಯಾಗಿತ್ತು. ಪುನಃ ಅದನ್ನು ತಪ್ಪು ಅರ್ಥ ಮಾಡಿಕೊಳ್ಳುವ ಜನ ಇರಬಹುದು. ನಾವು ಒಂದನ್ನು ಬಚ್ಚಿಟ್ಟು, ಇನ್ನೊಂದನ್ನು ಮಾತ್ರ ಹೇಳುತ್ತಿದ್ದೇವೆ ಎಂದು ತಿಳಿದುಕೊಳ್ಳಬಾರದು. ಹಾಗೆ ಹೇಳಲು ಬರುವುದಿಲ್ಲ. ಲಿಖಿತ ಉತ್ತರವನ್ನು ಕೊಡುವ 15-20 ದಿನಗಳ ಕೆಳಗೆ ನಮ್ಮ ಇಲಾಖೆಯ ಆಯುಕ್ತರು ಎಲ್ಲಾ ಮಾಧ್ಯಮಕ್ಕೂ ಇದೇ ಉತ್ತರವನ್ನು ಕೊಟ್ಟಿದ್ದರು. ಈಗಲೂ ಇದೇ ಉತ್ತರವನ್ನು ಕೊಟ್ಟಿದ್ದೇವೆ. ಇದರಲ್ಲಿ ಯಾವ ಗೊಂದಲವೂ ಬೇಡ. ಅದಾದ ನಂತರ, ಮತ್ತೊಂದು ವಿಚಾರವೆಂದರೆ, ಭಾಷಾ ಮಾಧ್ಯಮದ ಬಗ್ಗೆಯೂ ನಿರ್ಧಾರ ತೆಗೆದುಕೊಂಡಿದ್ದರು. 1ನೇ ತರಗತಿಯಿಂದ 7ನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡದಲ್ಲಿ ಇರಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಮಾಡಿರುವ ಎರಡನೇ ಶಿಫಾರಸ್ಸು ಏನು ಇದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ತಾತ್ವಿಕವಾಗಿ ಸರ್ಕಾರ ಒಪ್ಪಿದ್ದರೂ ಕೂಡ ರಾಜ್ಯ ಉಚ್ಚನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವಾದ ಮೇಲೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಅಭಿಪ್ರಾಯಪಡಲಾಗಿದೆ. ತಡೆಯಾಜ್ಞೆಯ ಶೀಘ್ರ ತೆರವಿನ ಅಗತ್ಯ ಕ್ರಮ ಕೈಗೊಳ್ಳುವಂತೆ ಅಡ್ವೊಕೇಟ್ ಜನರಲ್ ಅವರಿಗೆ ತಿಳಿಸಬೇಕೆಂದು ಮಾನ್ಯ

ಮುಖ್ಯಮಂತ್ರಿಗಳು 2001ನೇ ಇಸವಿಯಲ್ಲಿ ಸೂಚಿಸಿದ್ದಾರೆ. ಅದು ಆದಮೇಲೆ ಹಲವಾರು ಬಾರಿ ಅಡ್ವೊಕೇಟ್ ಜನರಲ್‌ರವರ ಜೊತೆ ಮಾತನಾಡಿದ್ದೇವೆ. ಪುನಃ ವಿಚಾರ ತಿಳಿದುಕೊಳ್ಳೋಣ, ಅಕಸ್ಮಾತ್ ಇವತ್ತು ಚರ್ಚೆಗೆ ಬರಬವುದು ನಿನ್ನೆಯ ದಿವಸ ಸಭಾಧ್ಯಕ್ಷರು ಸೂಚನೆ ಕೊಟ್ಟಿದ್ದರು ಎಂದು ಹೇಳಿ ಇವತ್ತು ಬೆಳಿಗ್ಗೆ ಕೂಡ ನಾನು ಅಡ್ವೊಕೇಟ್ ಜನರಲ್ ಅವರನ್ನು ಸಂಪರ್ಕ ಮಾಡಿದೆ. ಒಂದು ಡಜನ್ ಸಲ ನಾನು ಬೆಂಚ್‌ಗೆ ಜ್ಞಾಪಿಸಿರಬಹುದು ಎಂದು ಅವರು ನನಗೆ ದೂರವಾಣಿ ಮೂಲಕ ಹೇಳಿದರು. ನಾವು ಆಗಲೇ ಲಿಖಿತ ಉತ್ತರದಲ್ಲಿ ಹೇಳಿರುವ ಹಾಗೆ ನಮ್ಮ ಪರವಾಗಿ ವಾದ ಮಾಡುತ್ತಿರುವ ಅಡ್ವೊಕೇಟ್ ಶ್ರೀ ಮನೋಹರ್ ಅವರನ್ನು ಕರೆಸಿಕೊಂಡು ಚರ್ಚೆ ಮಾಡಿದ್ದಾಗಿದೆ. ಎಲ್ಲಾ ರೀತಿಯ ಪ್ರಯತ್ನವನ್ನು ನಾವು ಮಾಡಿದ್ದೇವೆ. ದಯವಿಟ್ಟು ಸಾರ್ವಜನಿಕರು ಈ ವಿಚಾರದಲ್ಲಿ ಯಾವುದೇ ಸಂಶಯ ಇಟ್ಟುಕೊಳ್ಳುವುದು ಅನಗತ್ಯ. ಪದೇ ಪದೇ ಹೇಳಬೇಕಾಗಿ ಬರುತ್ತದೆ. ಏಕೆಂದರೆ ಯಾವುದೋ ಒಂದು ಉದ್ದೇಶ ಇಟ್ಟುಕೊಂಡು ನಿಧಾನ ಮಾಡುತ್ತಿದ್ದೇವೆ ಎನ್ನುವಂಥದ್ದು ಇಲ್ಲ. ಈ ವಿಷಯದ ಬಗ್ಗೆ ಕೋರ್ಟಿನಲ್ಲಿ ಒಂದೇ ಒಂದು ರಿಟ್ ಪಿಟಿಷನ್ ಇರುವುದು ಅಲ್ಲ. ಪ್ರಾಥಮಿಕ ಇಂಗ್ಲೀಷ್ ಶಾಲೆ ನಡೆಸುತ್ತಿರುವ ಸಂಘಟನೆ ಒಂದು ರಿಟ್ ಹಾಕಿದ ಮೇಲೆ ಜೊತೆಗೆ ಹಲವಾರು ರಿಟ್ ಅರ್ಜಿಗಳು ಕೂಡ ಹೈಕೋರ್ಟಿನಲ್ಲಿ ದಾಖಲಾತಿ ಆದವು. ಅದು ಆದಮೇಲೆ ಆ ಕೇಸ್‌ನ್ನು ಡಿವಿಶನ್ ಬೆಂಚ್‌ನಿಂದ ಫುಲ್ ಬೆಂಚ್‌ಗೆ ಅವರು ರೆಫರ್ ಮಾಡಿದರು. ಆ ಫುಲ್ ಬೆಂಚ್ ಇನ್ನೂ ಈ ಮ್ಯಾಟರ್‌ನ್ನು ಹಿಯರ್ ಮಾಡಿಲ್ಲ. ಇಷ್ಟು ಸಾರಿ ಕೋರ್ಟಿನಲ್ಲಿ ಮೆನ್‌ಷನ್ ಮಾಡಿದರೂ ಕೂಡ ಅದು ಬಂದಿಲ್ಲ. ಅವರು ಜಡ್ಜ್‌ಮೆಂಟ್‌ನಲ್ಲಿ ಆವಾಗ ಹೇಳಿದ್ದನ್ನು ಅದರಲ್ಲಿ ಸಣ್ಣದಾದಂಥ ನಾಲ್ಕೈದು ಸಾಲುಗಳನ್ನು ಓದಬೇಕೆಂದು ನನಗನ್ನಿಸುತ್ತಿದೆ. ಅರ್ಜಿದಾರರು ಹೇಳಿದರಂತೆ This would infringe ಯಾವುದು ಕನ್ನಡವನ್ನು ಕಡ್ಡಾಯವಾಗಿ 3ನೇ ತರಗತಿಯಿಂದ ಪಾಠ ಹೇಳಬೇಕು ಎಂದು ನೀವು ಮಾಡಿರುವುದು ಈ ಭಾಷಾ ಮಾಧ್ಯಮದ ಒಂದು ಅಂಗವಾಗಿ ಮಾಡಿದ್ದ ಶಿಫಾರಸ್ಸನ್ನು ನಾವು ಏನು ಒಪ್ಪಿಕೊಂಡಿದ್ದೇವೆ ಹಿಂದಿನ ಸರ್ಕಾರ ಅದನ್ನು this would infringe directly the fundamental rights of the child citizens and the parental right to choose the mode of education of their children under Artical 29(2) of the Constitution ಎಂದು ಹೇಳಿದ ಮೇಲೆ ಆ ಕೇಸ್ ನಡೆಯುತ್ತಿರುವಾಗ ಹೇಳಿದರು, ಅದೇನೆಂದರೆ,

At this stage, the learned Advocate General Vehemently opposes continuation of the interim order which is subsisting. In our opinion, having regard to the public importance of the matter in general and the effect that it will have upon the petitioners in particular who have questioned the impugned Government Orders, it appears to be just and expedient to continue the order of status-quo until further orders.

ಇದು ಇಷ್ಟು ಸ್ಪಷ್ಟವಾಗಿ ಆ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕೆನ್ನುವುದನ್ನು ಹೈಕೋರ್ಟ್‌ನವರು ಆ ಜಡ್ಜ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಹೇಳಿದ ಮೇಲೆ ನಾವು ಮಾಡಿದ

ಪ್ರಯತ್ನಗಳನ್ನು ಈಗಾಗಲೇ ಈ ಸದನಕ್ಕೆ ತಿಳಿಸಿದ್ದೇನೆ. ಅತ್ಯಂತ ಪ್ರಮುಖವಾದ ಶಿಫಾರಸ್ಸು ನಾಲ್ಕಅನ್ನು ನಾನು ಮತ್ತೆ ಮತ್ತೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಏನು ಹೇಳಿದ್ದಾರೆಂದರೆ - 'ಪ್ರಾಥಮಿಕ ಶಿಕ್ಷಣದ ಮೂರನೇ ತರಗತಿಯಿಂದ 2ನೇ ಭಾಷೆಯ ಕಲಿಕೆಯನ್ನು ಪ್ರಾರಂಭಿಸಿ ಆಂಗ್ಲೋ ಇಂಡಿಯನ್‌ರನ್ನೂ ಒಳಗೊಂಡಂತೆ ಕನ್ನಡೇತರ ಮಾಧ್ಯಮದ ವಿದ್ಯಾರ್ಥಿಗಳ 3ನೇ ತರಗತಿಯಿಂದ ಕನ್ನಡವನ್ನು 2ನೇ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗಬೇಕು'. ಎಂದು ಏನು ಹೇಳಿದ್ದರು. ಇದನ್ನು ಮುಖ್ಯಮಂತ್ರಿಗಳ ಸಭೆಯಲ್ಲಿ ತಾತ್ವಿಕವಾಗಿ ಕೂಡ, ಇನ್ನೊಂದನ್ನೂ ಕೂಡ ನಾವು ಲಿಖಿತ ಉತ್ತರದಲ್ಲಿ ಕೊಟ್ಟಿದ್ದೇವೆ, ಹಾಗೆಯೇ ಇದನ್ನು ಸಹ ಒಪ್ಪಿಕೊಂಡು ಆಗಿತ್ತು. ಆದರೆ 15-20 ದಿವಸಗಳ ಹಿಂದೆ ಒಂದು ಗೊಂದಲ ಆಗಿತ್ತು. ಮಾನ್ಯ ಸೋಮಣ್ಣನವರು ಅದನ್ನು ನೋಟೀಸ್ ಮಾಡಿರುತ್ತಾರೆ. ನಾನು ಊರಿನಲ್ಲಿ ಇರಲಿಲ್ಲ. ನಾನೇ ನಮ್ಮ ಆಯುಕ್ತರಿಗೆ ಒಂದು ಪ್ರೆಸ್ ಮೀಟ್ ಮಾಡಿ ಹೇಳಿ ಎಂದು ರಿಕ್ವೆಸ್ಟ್ ಮಾಡಿಕೊಂಡಿದ್ದೆ. ದಯವಿಟ್ಟು ಮೀಡಿಯಾಕ್ಕೆ ಹೇಳಿ ಮತ್ತು ಜನರಿಗೆ ತಿಳಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಏನೇನು ಶಿಫಾರಸ್ಸು ಮಾಡಿತ್ತು, ಯಾವುದನ್ನು ಒಪ್ಪಿಕೊಂಡು ಆಗಿದೆ, ಯಾವುದನ್ನು ಅನುಷ್ಠಾನಕ್ಕೆ ತಂದಿಲ್ಲ, ತಂದಿಲ್ಲದೇ ಹೋದರೆ ಕಾರಣ ಏನು ಎಂದು ನಾವು ಜನಕ್ಕೆ ತಿಳಿಸಬೇಕಾಗುತ್ತದೆ. ಹಾಗಾಗಿ ತಿಳಿಸಿ ಎಂದು ಹೇಳಿದ್ದೆ. ಪ್ರೆಸ್ ಮೀಟ್ ಮಾಡಿ ಹೇಳುವ ಆ ಸಂದರ್ಭದಲ್ಲಿ ಇದಕ್ಕೆ ಆದೇಶ ಇದೆ ಎನ್ನುವರೀತಿ ಅವರೇನಾದರೂ ಹೇಳಿದರೋ ನನಗಂತೂ ಗೊತ್ತಿಲ್ಲ. ನಾನು ಕೇಳಿದಾಗ ಆ ರೀತಿ ಹೇಳಿಲ್ಲ. ಸಾಧ್ಯವಾದರೆ ಇದನ್ನು ಅನುಷ್ಠಾನಕ್ಕೆ ತರಬೇಕು ಎನ್ನುವುದು ಒಂದು ಸರ್ಕಾರದ ಮನಸ್ಸಿನಲ್ಲಿದೆ ಎಂದು ಹೇಳಿದ್ದರಿಂದ, ಅವರು ಹೇಳಿದ್ದಕ್ಕೆ ಕಾರಣ ಇಷ್ಟೆ, ಅದೇನೆಂದರೆ, ಪಶ್ಚಿಮ ಬಂಗಾಳದಲ್ಲಿ, ಮಹಾರಾಷ್ಟ್ರದಲ್ಲಿ, ಪಂಜಾಬ್‌ನಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಪಾಠವನ್ನು ಕಲಿಸಿಕೊಡುತ್ತಿದ್ದಾರೆ. ಒಂದು ಭಾಷೆ ಅದು ಮಾಧ್ಯಮವಲ್ಲ. '3ನೇ ತರಗತಿಯಿಂದ ಇಂಗ್ಲೀಷ್ ಪಾಠ' ಎಂದು ಪ್ರಜಾವಾಣಿ ಮತ್ತು ಬೇರೆ ಪತ್ರಿಕೆಯಲ್ಲಿ ಹೆಡ್‌ಲೈನ್‌ನಲ್ಲಿ ಬಂದಿತ್ತು. ಇದನ್ನು ನೋಡಿದ ತಕ್ಷಣ ಜನ ಏನೆಂದುಕೊಳ್ಳುತ್ತಾರೆ ಎಲ್ಲಾ ಮುಗಿದುಹೋಯಿತು, ಇನ್ನೇನೂ ಚರ್ಚೆಗೆ ಇಲ್ಲ, ಇಂಗ್ಲೀಷ್ ಮೀಡಿಯಂ ಮಾಡುವುದಕ್ಕೆ ಸರ್ಕಾರ ಒಪ್ಪಿಕೊಂಡು ಬಿಟ್ಟಿದ್ದಾರೆ ಎಂದು ಸಾಮಾನ್ಯ ಜನ ಅಂದುಕೊಳ್ಳುತ್ತಾರೆ. ಆದ್ದರಿಂದ ಇದು ಮೀಡಿಯಂ ಅಲ್ಲ, ಮಾಧ್ಯಮದ ಬಗ್ಗೆ ಅಲ್ಲ, ಇಂಗ್ಲೀಷ್‌ನ್ನು ಒಂದು ಭಾಷೆಯಾಗಿ ಹೇಳಿಕೊಡುವಂಥದ್ದು. ಪಶ್ಚಿಮ ಬಂಗಾಳದಲ್ಲಿ ಇದನ್ನು ಮಾಡಿರಲಿಲ್ಲ. ಈಗ ಒಂದೆರಡು ವರ್ಷದಿಂದ ಇದನ್ನು ಅವರು ಅನುಷ್ಠಾನಕ್ಕೆ ತಂದಿದ್ದಾರೆ. ಆದರೆ ಈಗಾಗಲೇ ಹೇಳಿದ ಹಾಗೆ ಇದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದವರೂ ಕೂಡ ವಿರೋಧ ಮಾಡಿಲ್ಲ. ಇಂಗ್ಲೀಷ್ ಕನ್ನಡ ಎರಡನ್ನೂ ಭಾಷೆಯಾಗಿ ಕಡ್ಡಾಯವಾಗಿ ಹೇಳಬೇಕೆಂದು ಅವರೇ ಶಿಫಾರಸ್ಸು ಮಾಡಿದ್ದಾರೆ. ಯಾವುದೇ ವಿರೋಧಾಭಾಸ ಕೂಡ ಇಲ್ಲ. ಆದರೆ ಪ್ರಾಸಂಗಿಕವಾಗಿ ಹೇಳುತ್ತಿದ್ದೇನೆ, ಈ ದೃಷ್ಟಿಯಲ್ಲಿ ಆಯುಕ್ತರು ಹೇಳಿರಬಹುದು, ಬಾಕಿ ಅವರು ಹೇಳಿದ್ದು ಎಲ್ಲದಕ್ಕೂ ಕೂಡ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಅವರು ಒಂದು ಏನು ಮಾಡಿಬಿಟ್ಟರೆಂದರೆ ಇಂಗ್ಲೀಷ್ ಭಾಷೆಯನ್ನು ಮೂರನೇ ತರಗತಿಯಿಂದ ಕಡ್ಡಾಯವಾಗಿ ಹೇಳುವುದನ್ನು ಆದೇಶ ಮಾಡಿಬಿಟ್ಟಿದ್ದೇವೆ, ಕನ್ನಡವನ್ನು ಅದೇ ರೀತಿ ಕಡ್ಡಾಯವಾಗಿ ಹೇಳುವುದನ್ನು ಆದೇಶ ಮಾಡಿಲ್ಲ, ಉದ್ದೇಶಪೂರ್ವಕವಾಗಿ ಮಾಡಿದ್ದೇವೆ ಎಂದು ಬಂದ ತಕ್ಷಣ ಒಬ್ಬರೋ ಇಬ್ಬರೋ ಮೂರನೇ ದಿವಸವೇ ಪ್ರೆಸ್

ಮೂಡಿಯಾದವರಿಗೆ ಹೇಳಿಬಿಟ್ಟರು. ಅದಾದನಂತರ ನಾನು ಸತತವಾಗಿ ಇದಕ್ಕೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಯಾವ ಆದೇಶವನ್ನೂ ಇದರ ಬಗ್ಗೆ ಹೊರಡಿಸಿಲ್ಲ. ಹಿಂದೆ ಎರಡು ಕರಡು ಆದೇಶ ಇದ್ದದ್ದು ನಿಜ. ಅದು ಇನ್ನೂ ಫೈಲ್‌ನಲ್ಲಿ ಇದೆ. ಈ ಉಚ್ಚನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಮತ್ತು ನಮ್ಮ ಅಡ್ವೊಕೇಟ್ ಜನರಲ್‌ರವರು ಹಾಗೂ ಲಾ ಡಿಪಾರ್ಟ್‌ಮೆಂಟ್‌ನವರು ಹೀಗೆ ಎರಡೂ ಕಡೆಯವರು - ಇದಕ್ಕೆ ಆದೇಶ ಮಾಡಿದರೆ ಕೋರ್ಟಿನ ನಿಂದನೆಯಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಆದೇಶ ಹೊರಡಿಸಲಿಲ್ಲ. ಇಷ್ಟಾದರೂ ನೀವು ಮುಂದೆ ಹೋಗಿ ಆದೇಶ ಮಾಡಿ ಎಂದು ಕೆಲವರು ಹೇಳುತ್ತಾರೆ. ಅಂದರೆ ಒಂದು ಇಡೀ ಸರ್ಕಾರವನ್ನು ಕೋರ್ಟಿನ ಮುಂದೆ ಹೋಗಿ ನಿಲ್ಲಿಸುವುದಕ್ಕೆ ನನಗೆ ಅಧಿಕಾರ ಇಲ್ಲ. ಕನ್ನಡದ ಬಗ್ಗೆ ಮಮತೆ ಇರುವುದು, ನನ್ನದು ಮಾತೃಭಾಷೆ ಕನ್ನಡ, ನಾನೂ ಕೂಡ ನನ್ನ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸಿದ್ದೇನೆ. ಇಲ್ಲಿ ಇರುವಂಥ ಕೆಲವು ಸ್ನೇಹಿತರಿಗೆ ಇದು ಗೊತ್ತಿದೆ. ಇದು ಬರೀ ಖಾಸಗಿ ವಿಚಾರ ನನಗೆ ಉಪದೇಶ ಹೇಳುವುದು ಅನಗತ್ಯವೆಂದೆನಿಸುತ್ತದೆ. ಆದರೆ ಇದು ಇರುವಾಗ ಇಡೀ ಸರ್ಕಾರವನ್ನು ಕೋರ್ಟ್ ಮುಂದೆ ನಿಲ್ಲಿಸುವುದು, ಕೋರ್ಟ್ ನಿಂದನೆಗೆ ಎಕ್ಸ್‌ಪೋಸ್ ಮಾಡುವುದು ಸರಿಯಿಲ್ಲ, ಅದು ನನಗೆ ಅಧಿಕಾರ ಇಲ್ಲ ಎಂದು ನನಗನ್ನಿಸುತ್ತಿದೆ. ಇನ್ನು ನಿನ್ನೆಯ ಲಿಖಿತ ಉತ್ತರದಲ್ಲಿ - ಪ್ರಾಥಮಿಕ ಹಂತದ ಮೂರನೇ ತರಗತಿಯಿಂದ ಇಂಗ್ಲೀಷನ್ನು ಒಂದು ಭಾಷೆಯಾಗಿ 2003-04 ರ ಸಾಲಿನಿಂದ ಸರ್ಕಾರ ತಾತ್ವಿಕವಾಗಿ ಒಪ್ಪಿದ್ದು ಅದನ್ನು ಜಾರಿಗೆ ತರಬೇಕು ಏನೋ ಎನ್ನುವಂಥದ್ದು ಇದೆ. ಇಲ್ಲಿ ಒಂದು ವಿಚಾರ ಇದೆ. ಇಂಗ್ಲೀಷನ್ನು ಮೂರನೇ ತರಗತಿಯಿಂದ ಕಡ್ಡಾಯವಾಗಿ ತೆಗೆದುಕೊಳ್ಳುವುದಕ್ಕೆ ಅವರಿಗೆ ಸ್ಟೇ ಆರ್ಡರ್ ಇಲ್ಲ. ಕನ್ನಡಕ್ಕೆ ಸ್ಟೇ ಆರ್ಡರ್ ಇದೆ. ಆದರೂ ಕೂಡ ತಾರತಮ್ಯ ಮಾಡಿದ ಹಾಗೆ ಆಗುತ್ತದೆ ಎಂದು ನಾವು ಎರಡಕ್ಕೂ ಆದೇಶ ಹೊರಡಿಸಿಲ್ಲ. ಮತ್ತು ನಿನ್ನೆಯ ದಿವಸ ಕೊಟ್ಟಂಥ ನನ್ನ ಲಿಖಿತ ಹೇಳಿಕೆ 2003-04 ಏನು ಇದೆ ಆ ಒಂದು ಹೇಳಿಕೆಗೆ ನಿಮ್ಮ ಅನುಮತಿ ಪಡೆದು ಒಂದು ಮಾರ್ಪಡನ್ನು ನಾನು ಹೇಳಿಕೊಳ್ಳುತ್ತಿದ್ದೇನೆ. ಈ ರೀತಿ ಆಪಾದನೆಗಳು ಬರುವುದು, ಜನ ತಪ್ಪು ಅರ್ಥ ಮಾಡಿಕೊಳ್ಳುವುದು, ಪ್ರಚಾರ ಮಾಡುವುದು, ಅಪಪ್ರಚಾರ ಮಾಡುವುದು ಇರುವುದರಿಂದ ಈ ಕೋರ್ಟ್ ತೀರ್ಪು ಬರುವವರೆಗೂ ಕೂಡ ಇಂಗ್ಲೀಷ್‌ನ್ನೂ ಕೂಡ ಕಡ್ಡಾಯವಾಗಿ ಹೇಳುವುದಕ್ಕೆ ನಾನು ತಯಾರು ಇಲ್ಲ. ಆ 2003-04 ರಿಂದ ನಾವೇನು ತಾತ್ವಿಕವಾಗಿ ಒಪ್ಪಿ ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದೇವಲ್ಲಾ ಅದನ್ನು ಮಾಡುವುದಕ್ಕೆ ನಾನು ವೈಯಕ್ತಿಕವಾಗಿ ಈಗ ಸಿದ್ಧನಿಲ್ಲ. ಇಂಗ್ಲೀಷ್‌ನ ಪಾಠ ಹೇಳಿಸುವುದಕ್ಕೆ ಯಾವುದೇ ಕಾನೂನಿನ ಅಡೆತಡೆ ಇಲ್ಲ. ಆದರೂ ಕೂಡ ನಮ್ಮ ಒಂದು ನಿಲುವು, ನಮ್ಮ ಮನಸ್ಸಿನಲ್ಲಿ ಬೇರೆ ಏನೂ ಇಲ್ಲ ಎನ್ನುವುದು ಸ್ಪಷ್ಟವಾಗಲಿ ಎನ್ನುವುದಕ್ಕೋಸ್ಕರ ಅದನ್ನು ಮಾಡಲಿಕ್ಕೆ ನಾನು ತಯಾರಿಲ್ಲ ಎಂದು ಹೇಳುತ್ತಿದ್ದೇನೆ. ಆದರೆ ಒಂದು ವಿಚಾರ ಇಲ್ಲಿ ಆಗುತ್ತದೆ. ನಾನು ಈಗ 18-19 ಜಿಲ್ಲೆಯಲ್ಲಿ ಏನು ನೋಡಿಕೊಂಡು ಬಂದಿದ್ದೇನೆ, ಅದು ಹೊಸ ವಿಚಾರ ಏನೂ ಅಲ್ಲ, ಇಲ್ಲಿ ಇರುವ ಬಹುತೇಕ ಜನ ಅನುಭವಿಗಳು, ಅವರಿಗೆ ಗೊತ್ತಿದೆ. ಇಂಗ್ಲೀಷ್, ವಿಜ್ಞಾನ ಮತ್ತು ಗಣಿತ ಈ ಮೂರು ವಿಷಯಗಳಲ್ಲಿ ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು ಫೇಲ್ ಆಗುತ್ತಿದ್ದಾರೆ. ನಾವು ಅವರಿಗೆ ಇಂಗ್ಲೀಷ್ ಭಾಷೆಯನ್ನು ಒಂದು ಭಾಷೆಯನ್ನಾಗಿ ಹೇಳಿಕೊಡುವುದಕ್ಕೆ ಹೋಗದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಇಲ್ಲಿ ಎರಡೂ ಕಡೆಯಲ್ಲಿ ನಮ್ಮ ಸ್ನೇಹಿತರೂ ಎಲ್ಲರೂ ಇದ್ದಾರೆ. ಸರ್ಕಾರಿ

ಶಾಲೆಗಳಿಗೆ ಎಷ್ಟೋ ಮಕ್ಕಳು ಏಕೆ ಹೋಗುವುದಿಲ್ಲ. ಇಷ್ಟು ಫೆಸಲಿಟೀಸ್ ಕೊಟ್ಟು ನಾವು ಇಷ್ಟು ಚೆನ್ನಾಗಿ ಇಟ್ಟಿದ್ದರೂ ಕೂಡ ಖಾಸಗಿ ಶಾಲೆಯಲ್ಲಿ ಇಂಗ್ಲೀಷ್ ಹೇಳಿಕೊಡುತ್ತಾರೆ. ಸಾಂದರ್ಭಿಕವಾಗಿ ನಾನು ಹೇಳಬೇಕಾಗುತ್ತದೆ. ಬರೀ ನಾವು ಯಾವಾಗ ನೋಡಿದರೂ ಯಾರೋ ಅಟ್ಯಾಕ್ ಮಾಡಿದಾಗಲೂ ನಾವು ಡಿಫೆನ್ಸೀವ್ ಆಗಿ ಇರುತ್ತೇನೆ. ಎಷ್ಟು ಖಾಸಗಿ ಶಾಲೆಗಳಲ್ಲಿ ಇವತ್ತು ನಮ್ಮ ಅನುಮತಿ ಇಲ್ಲದೆ ಮೂರನೇ ತರಗತಿಯಿಂದ ಇಂಗ್ಲೀಷ್ ಪಾಠ ಹೇಳಿಕೊಡುತ್ತಿಲ್ಲವೇ ? ಅದಕ್ಕೆ ಒಂದು ಸುಲಭವಾದ ಉತ್ತರವನ್ನು ಇವರು ಹೇಳುತ್ತಾರೆ ಅದೇನೆಂದರೆ ನೀವು ಹೋಗಿ ಸೂಪರ್‌ವೈಸ್ ಮಾಡಿ ಎಂದು. ಎಷ್ಟು ಸಾವಿರ ಶಾಲೆಗಳಿಗೆ ಒಂದು ಶಿಕ್ಷಣ ಇಲಾಖೆಯ ವತಿಯಿಂದ ಇನ್ಸ್‌ಪೆಕ್ಟರುಗಳು ಹೋಗಿ ಆ ಸಂದರ್ಭದಲ್ಲಿ ಅಲ್ಲಿ ಇದ್ದು ಇಂಗ್ಲೀಷ್ ಪಾಠ ಹೇಳಿಕೊಡುತ್ತಿದ್ದಾರೆಯೇ ಇಲ್ಲವೇ ಎಂದು ನೋಡುವುದಕ್ಕಾಗುತ್ತದೆಯೇ ? ಗೌರಿಬಿದನೂರಿನಲ್ಲಿ ನಮ್ಮ ಶಾಲೆಯಲ್ಲಿ ಇಂಗ್ಲೀಷ್ ಪಾಠವನ್ನು ಮಾಡುತ್ತಿದ್ದೇವೆ ಮೂರನೇ ತರಗತಿಯಿಂದ, ಎಂದು ಡಾ। ಹೆಚ್. ನರಸಿಂಹಯ್ಯ ನವರೇ ನನಗೆ ಹೇಳಿದರು. ಸುಬ್ರಮಣ್ಯಪುರದಲ್ಲಿ ಒಂದು ಶಾಲೆಗೆ ಕರೆದುಕೊಂಡು ಹೋಗಿದ್ದರು, ಅಲ್ಲಿ ಇಂಗ್ಲೀಷ್ ಪಾಠವನ್ನು ಮಾಡುತ್ತಿದ್ದರು. ಬೆರಳು ತೋರಿಸಿ ಇಲ್ಲಸಲ್ಲದ ಆಪಾದನೆ ಮಾಡಿ ನಾವು ಏನೋ ದೊಡ್ಡ ಅಪರಾಧ ಮಾಡಿದ್ದೇವೆಂದು ಹೇಳುವುದು ದುಃಖದ ವಿಚಾರ ಎಂದು ಬಹಳ ವಿಷಾದದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಬಹಳ ಪ್ರಾಮಾಣಿಕವಾಗಿ ನಾವು ಕೆಲಸ ಮಾಡುತ್ತಿದ್ದೇವೆ. ದಯವಿಟ್ಟು ಇಂಥ ಆಪಾದನೆಯನ್ನು ಯಾರೂ ಮಾಡಬಾರದು ಮತ್ತು ಸಾರ್ವಜನಿಕರೂ ಯಾರೂ ಸಹ ಮಿಸ್‌ಅಂಡರ್‌ಸ್ಟಾಂಡಿಂಗ್ ಮಾಡಿಕೊಳ್ಳಬಾರದು. ಈಗಾಗಲೇ 2-3 ವಿಚಾರ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಆದೇಶ ಇಲ್ಲ ಮತ್ತು ಮುಂದಿನ ವರ್ಷದಿಂದ ಕೂಡ ಇಂಗ್ಲೀಷನ್ನು ಅದಕ್ಕೆ ಅಡೆತಡೆ ಇಲ್ಲದಿದ್ದರೂ ಕೂಡ ಪಾಠ ಹೇಳಿಕೊಡುವುದಕ್ಕೆ ನಾವು ಅಧಿಕೃತವಾಗಿ ಆದೇಶ ಹೊರಡಿಸುವುದಿಲ್ಲ. ಏಕೆಂದರೆ ಇಲ್ಲಸಲ್ಲದ ಆಪಾದನೆಗಳು ಬರುತ್ತವೆ. ಆ ಕೋರ್ಟ್‌ನಲ್ಲಿ ತೀರ್ಪು ಆಗಬೇಕು. ಅಲ್ಲಿಯವರೆಗೆ ನಮ್ಮ ಸದಸ್ಯರು ಅಥವಾ ನಮ್ಮ ಹಳ್ಳಿಯ ಜನ ಏನು ಹೇಳುತ್ತಾರೆ ಅವರೇ ಎಲ್ಲರೂ ಆಲೋಚನೆ ಮಾಡಲಿ. ಮಾನ್ಯ ಸೋಮಣ್ಣನವರು ಎರಡು ಮೂರು ಪ್ರಶ್ನೆ ಕೇಳಿದರು.

1.30 ಪಿ.ಎಂ.

ವಿಧಾನಮಂಡಲದಲ್ಲಿ ಚರ್ಚೆಯಾಗಿದೆಯೇ ಎಂದು ನಿನ್ನೆ ಕೇಳಿದಿರಿ. ನನಗೆ ಗೊತ್ತಿಲ್ಲ ವಿಧಾನ ಮಂಡಲದ ಸಚಿವಾಲಯದಿಂದ ನಾನು ನಿನ್ನೆ ಮಾಹಿತಿ ಕೇಳಿದ್ದೇನೆ. ಬಹುಶಃ ಆಗಿಲ್ಲವೆಂದು ಸುಮಾರು ಸೀನಿಯರ್ ಸದಸ್ಯರು ಹೇಳಿದರು. ಈ ಭಾಷಾ ಮಾಧ್ಯಮದ ವಿಚಾರ ಚರ್ಚೆಯಾಗಿದೆಯೇ, ಇಲ್ಲವೇ ಎಂದು ನಾನು ತಿಳಿದುಕೊಳ್ಳುತ್ತೇನೆ. ಪೋಷಕರ ಅಭಿಪ್ರಾಯವೇನೆಂದು ಸೋಮಣ್ಣನವರು ಕೇಳಿದರು. ನನಗೆ ತಿಳಿದ ಮಟ್ಟಿಗೆ ಪೋಷಕರ ಬಗ್ಗೆ, ಅವರ ಅಭಿಪ್ರಾಯದ ಬಗ್ಗೆ ಇಲ್ಲಿಯವರೆಗೆ ಸರ್ಕಾರದ ವತಿಯಿಂದ ಯಾರೂ ಸಮೀಕ್ಷೆ ಮಾಡಿಲ್ಲ. ಅದು ತಪ್ಪಿರಬಹುದು. ಇಲ್ಲಿ ಬಹಳ ಆಸಕ್ತಿ ಇರುವ ಸದಸ್ಯರು ಎರಡೂ ಕಡೆ ಇದ್ದಾರೆ. ಅವರು ಹೇಳಬೇಕು. ನನಗೆ ತಿಳಿದ ಮಟ್ಟಿಗೆ ಮಾಡಿಲ್ಲ. ಜೊತೆಗೆ, 1995ರ ಉಚ್ಚ ನ್ಯಾಯಾಲಯದ ಏಪ್ರಿಲ್ ತಿಂಗಳ ಆದೇಶದಲ್ಲಿ ಕೂಡ, ಪೋಷಕರ ಹಕ್ಕಿನ ಬಗ್ಗೆ ಮಾತಿರುವ ಬಗ್ಗೆ ನನಗೆ ಹಲವಾರು ಪೋಷಕರು ಸಂಪರ್ಕಿಸಿದ್ದಾರೆ. ಇದ್ದರೂ ಕೂಡ ನೀವು ನಮ್ಮನ್ನು ಕೇಳುತ್ತಿಲ್ಲ, ನೀವು ಸರ್ಕಾರದಲ್ಲಿ ಒಬ್ಬರು, ಮೂವರು ಜನ ಕುಳಿತು ತೀರ್ಮಾನ ತೆಗೆದುಕೊಂಡು ಮಾಡುತ್ತಿದ್ದೀರಿ ಎಂದು ಹೇಳುತ್ತಾರೆ.

ಅದಕ್ಕೆ ನಾನು ನೇರವಾಗಿ ಉತ್ತರ ಕೊಡುವುದು ಕಷ್ಟವಾಗುತ್ತದೆ. ಪ್ರಾಧಿಕಾರ ಇರುತ್ತದೆ, ಅವರು ಶಿಫಾರಸ್ಸು ಮಾಡುತ್ತಾರೆ. ಮುಖ್ಯಮಂತ್ರಿಗಳ ಸಭೆಯಾಗುತ್ತಿದೆ, ತೀರ್ಮಾನವಾಗಬೇಕು, ಅದು ನ್ಯಾಯಬದ್ಧವಿರುತ್ತದೆ. ನಾನೊಬ್ಬ ಅಲ್ಲ. ನಾನೊಬ್ಬ ಈ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಂದರೆ, ವ್ಯವಸ್ಥಿತವಾದ ಇನ್ಸ್‌ಟಿಟ್ಯೂಷನಲ್ ಅರೇಂಜ್‌ಮೆಂಟ್ಸ್ ಇವೆ. ಅದನ್ನು ಮಾಡಬೇಕಾಗುತ್ತದೆ. ಹಾಗೆಂದ ತಕ್ಷಣ ಇಲ್ಲಿ ಚರ್ಚೆ ಮಾಡಬಾರದು, ಯಾರೂ ಸಮೀಕ್ಷೆ ಮಾಡಬಾರದು, ಯಾರ ಅಭಿಪ್ರಾಯ ಕೇಳಬಾರದೆಂದು ಖಂಡಿತವಾಗಿ ನಾನು ಹೇಳುತ್ತಿಲ್ಲ. ಅದು ಅಗತ್ಯವಿರುವ ವಿಚಾರ. ಕಡೆಯ ಸೆಂಟೆನ್ಸ್ ಆಗ ಓದಿದ್ದನ್ನು ನಾನು ಪುನಃ ಓದಿ ಸುಮ್ಮನಾಗುತ್ತೇನೆ. ಹೈಕೋರ್ಟ್‌ನಲ್ಲಿ, Parental right on how to educate their children is involved ಎಂದು ಹೇಳಿದ್ದನ್ನೂ ಕೂಡ ತಮಗೆ ಹೇಳುತ್ತೇನೆಯೇ ಹೊರತು ಸ್ಪಷ್ಟವಾದ ಪ್ರಶ್ನೆಗಳಿಗೆ ಬೇರೆ ಉತ್ತರ ನನ್ನ ಹತ್ತಿರವಿಲ್ಲ.

ಶ್ರೀ ವಿ. ಸೋಮಣ್ಣ :- ಮಾನ್ಯ ಸಚಿವರು ಉತ್ತರಿಸಿದ್ದಾರೆ. ಈ ಎಲ್ಲಾ ಅಡೆತಡೆಗಳಿರುವುದು ಗ್ರಾಮೀಣ ಪ್ರದೇಶದ ಮಕ್ಕಳಿಗೆ. ನನಗನ್ನಿಸುತ್ತದೆ, ನಮ್ಮ ಮಕ್ಕಳಾಗಲೀ ಇಲ್ಲಿರುವ ಬಹುತೇಕರ ಮಕ್ಕಳು ಇಂಗ್ಲೀಷ್ ಶಾಲೆಗಳಲ್ಲೇ ಕಲಿಯುತ್ತಾರೆ. ಗ್ಲೋಬಲೈಜೇಷನ್, ಲಿಬರಲೈಸೇಷನ್‌ನಲ್ಲಿ ಆ ಮಕ್ಕಳು ಇಂಟರ್‌ವ್ಯೂಗೆ ಹೋದರೆ, ಪರಿಣಾಮ ಏನಾಗುತ್ತದೆ ? ಸಿ.ಇ.ಟಿ.ಯಲ್ಲಿ ತಾವು ಅಂಕಿ-ಅಂಶ ತೆಗೆದುಕೊಂಡರೆ ಎಷ್ಟು ಜನ ಕನ್ನಡ ಶಾಲೆಗಳಲ್ಲಿ ಓದಿದವರು ಇವತ್ತು ಅಲ್ಲೆಲ್ಲಾ ಫೇಲ್ ಆಗುತ್ತಿರುವುದು ತಿಳಿಯುತ್ತದೆ. ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ, ಪೋಷಕರ ಕರ್ತವ್ಯಕ್ಕಿಂತ ಹೆಚ್ಚಾಗಿ ಕನ್ನಡ ಮಾಧ್ಯಮ ಇವತ್ತು ಏನಿದೆ, ಅದನ್ನು ಯಾವ ರೀತಿ ನೀವು ರಾಷ್ಟ್ರದ ಬಗ್ಗೆ ನೀವು ಎಲ್ಲೋ ಒಂದು ಕಡೆ ನಾಗಾಲೋಕದಲ್ಲಿ ಹೋಗುತ್ತಿರುವ ತಾಂತ್ರಿಕ ಜಗತ್ತಿಗೆ ಕರ್ನಾಟಕವನ್ನು ಸ್ಪಂದಿಸುವ, ಕರ್ನಾಟಕದ ಬಡವರ ಮಕ್ಕಳು ಸರ್ಕಾರದ ಹುದ್ದೆಗಳಿಗೆ ಇವತ್ತು ಎಲ್ಲೋ ಒಂದು ಕಡೆ ಆಗದೇ ಇರುವಾಗ, ಬೇರೆ ಬೇರೆ ಹುದ್ದೆಗಳಿಗೆ ಹೋಗಬೇಕಾಗದರೆ ಅವರು ಒಂದು ವ್ಯವಸ್ಥೆಯನ್ನು ಸರಿಪಡಿಸುವುದು ಯಾವ ರೀತಿ ? ಇದು ಕೇವಲ ಇವತ್ತಿನ ಸರ್ಕಾರದ್ದಲ್ಲ. ಸುಮಾರು ವರ್ಷಗಳಿಂದ ಚಿಂತಿಸಿದ್ದಾರೆ. ಮಾನ್ಯ ಸಚಿವರು ಕೋರ್ಟ್‌ನ ಆದೇಶವಿದೆ, ಅದಕ್ಕೋಸ್ಕರ, ಕೋರ್ಟಿನ ಆದೇಶ ತೆರವಾಗುವ ತನಕ ಎಂದು ಹೇಳಿದರು. ಅದಾದಮೇಲೆ, ನೀವು 1-7ನೇ ತರಗತಿಯವರೆಗೆ ಏನಿದೆ ಅವರ ಭವಿಷ್ಯವೇನು ? ಇದರ ಬಗ್ಗೆ ಹೇಳಬೇಕು.

ಶ್ರೀ ಕರಿಯಣ್ಣ :- ವಿವರಣೆ ಜಾಸ್ತಿ ಆಯಿತು. ಕೇಳುವುದು ಜಾಸ್ತಿಯಾಯಿತು. ಇಲ್ಲದೇ ಹೋದರೆ ಯಾವುದಕ್ಕಾದರೂ ಕನ್‌ವರ್ಟ್ ಮಾಡಿ. ಕನ್‌ವರ್ಟ್ ಮಾಡಿದರೆ ಚರ್ಚೆಯಾಗುತ್ತದೆ.

ಉಪಾಧ್ಯಕ್ಷರು :- ಕನ್‌ವರ್ಟ್ ಮಾಡುವುದಿಲ್ಲ.

ಶ್ರೀ ಕರಿಯಣ್ಣ :- ಅರ್ಧ ಗಂಟೆಯಿಂದ ಒಂದೇ ಆದರೆ ನಾವೇನು ಕೇಳೋಣ ?

ಉಪಾಧ್ಯಕ್ಷರು :- ಮಂತ್ರಿಗಳು ವಿವರವಾಗಿ ಉತ್ತರಿಸಿದ್ದಾರೆ.

ಶ್ರೀ ವಿ. ಸೋಮಣ್ಣ :- ಇದು ಗಂಭೀರವಾದ ವಿಚಾರ

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಎಲ್ಲಾ ಮಕ್ಕಳ ಭವಿಷ್ಯದ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ವಿ. ಸೋಮಣ್ಣ :- ಈ ವಿಷಯದ ಗಂಭೀರತೆಯನ್ನು ಅರಿತುಕೊಳ್ಳಬೇಕು.

ಉಪಾಧ್ಯಕ್ಷರು :- ಸಾರಿ ಆಗಲ್ಲ. ಅವರು ಸವಿಸ್ತಾರವಾಗಿ ಉತ್ತರಿಸಿದ್ದಾರೆ.

ಇ) ಕಾರವಾರದಲ್ಲಿ ಸೀಬರ್ಡ್ ನೌಕಾನೆಲೆ ವಿಷಯ ಅನೇಕ ನಿರಾಶ್ರಿತರ ಸಮಸ್ಯೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ನಾನು ಶೂನ್ಯವೇಳೆಯಲ್ಲಿ ನಮ್ಮ ವಿಷ್ಯಾದಲ್ಲಿ ಅತ್ಯಂತ ಪ್ರತಿಷ್ಠಿತವಾದ ಕಾರವಾರದಲ್ಲಿ ಬರುತ್ತಿದ್ದ ಸೀ-ಬರ್ಡ್ ನೌಕಾನೆಲೆ ವಿಷಯವನ್ನು, ಅನೇಕ ನಿರಾಶ್ರಿತರ ಸಮಸ್ಯೆಗಳನ್ನು ಉಲ್ಲೇಖಿಸಬೇಕೆಂದು ಕಳೆದ 2-3 ದಿನಗಳಿಂದ ಅಧ್ಯಕ್ಷರಲ್ಲಿ ವಿನಂತಿಸಿದ್ದೆ. ಇದುವರೆಗೆ ಕಂದಾಯ ಸಚಿವರು ಇದ್ದರು. ಅದಕ್ಕೆ ಅವರು ಉತ್ತರ ಕೊಡಬೇಕು. ಅವರು ಇರಬೇಕು ಎಂದು ತಮ್ಮಿಂದ ಸೂಚನೆ ಹೋಗಬೇಕು. ಆದರೆ, ಇಲ್ಲೇ ಎಲ್ಲೋ ಹೊರಗೆ ಹೋಗಿರಬೇಕು. ತಾವು ಅವರನ್ನು ಸಭೆಗೆ ಕರೆಸಿದರೆ ಈ ವಿಷಯಕ್ಕೆ ಸಮರ್ಪಕವಾಗಿ ಉತ್ತರಿಸಬೇಕಾಗುತ್ತದೆ. ಸಮಸ್ಯೆಯ ಗಂಭೀರತೆಯನ್ನು ಅವರಿಗೆ ಅರ್ಥ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಮಲ್ಲಿಕಾರ್ಜುನ್‌ರವರು ಇದ್ದರು.

ಉಪಾಧ್ಯಕ್ಷರು :- ಇಲ್ಲೇ ಇದ್ದಾರೆ. ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- 1986ನೇ ಇಸವಿಯೊಳಗೆ ಅಂದಿನ ಪ್ರಧಾನಿಗಳಾದ ಶ್ರೀಯುತ ರಾಜೀವ್‌ಗಾಂಧಿಯವರು ಈ ಒಂದು ಸೀ-ಬರ್ಡ್ ನೌಕಾನೆಲೆ ಬಗ್ಗೆ ಅಡಿಗಲ್ಲನ್ನಿಟ್ಟರು. ಅದು ಅತ್ಯಂತ ದೊಡ್ಡದಾದ ಮತ್ತು ಅತ್ಯಾಧುನಿಕವಾದ ಸೌಕರ್ಯವನ್ನು ಹೊಂದಿರುವ ವಿಜ್ಞಾನದ ಎಲ್ಲಾ ರೀತಿಯ ಸಂಪೂರ್ಣ ಸದ್ಬಳಕೆ ಮಾಡಿಕೊಂಡು ಈ ಒಂದು ನೌಕಾನೆಲೆ ಪ್ರಾರಂಭಿಸಬೇಕೆನ್ನುವ ಉದ್ದೇಶದಿಂದ 1986ರಲ್ಲಿ ಇಲ್ಲಿ ನೌಕಾನೆಲೆಗೆ ಅಡಿಗಲ್ಲನ್ನಿಟ್ಟರು. ಬಹುಶಃ 98ರ ತನಕ ಅದಕ್ಕೆ ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳಾಗಿಲ್ಲ. ಈ ಯೋಜನೆ ಬರುತ್ತದೆನ್ನುವ ಒಂದು ವಿಶ್ವಾಸ ಸಹ ಜಿಲ್ಲೆಯ ಜನರಲ್ಲಾಗಲೀ, ರಾಜ್ಯ, ದೇಶದ ಜನರಲ್ಲಿಯೂ ಇರಲಿಲ್ಲ. ಹಾಗಾಗಿ, ಅನೇಕ ರೀತಿಯ ಸಮಸ್ಯೆಗಳು ಅಂದಿನಿಂದ ಇಂದಿನವರೆಗೂ ಮುಂದುವರಿದಿರುವುದನ್ನು ಕಾಣುತ್ತಿದ್ದೇವೆ. ಅದರೆ, ಅಲ್ಲಿ ಲ್ಯಾಂಡ್ ಅಕ್ವಿಜೆಷನ್ ಮಾಡಿಕೊಳ್ಳುವುದಿರಲಿ ಅಲ್ಲಿಯ ಕುಟುಂಬಗಳನ್ನು ಗುರುತಿಸುವುದಿರಲಿ, ಇದೆಲ್ಲವೂ 86ನೇ ಇಸವಿಯೊಳಗೆ ಪ್ರಕ್ರಿಯೆ ಆಯಿತು. 86ನೇ ಇಸವಿಯಲ್ಲಿ ಪ್ರಕ್ರಿಯೆಗಳಾದರೂ ಅದಕ್ಕೆ ಕೆಲಸ ಕಾರ್ಯಗತಗೊಳ್ಳುವುದಕ್ಕೆ 98ನೇ ಇಸವಿಯೊಳಗೆ ಇವತ್ತಿನ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿರುವ ಶ್ರೀ ಜಾರ್ಜ್ ಫರ್ನಾಂಡೀಸ್‌ರವರು ಸ್ವತಃ ಬಂದು ಕಾರವಾದರಲ್ಲಿ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿ, ರಾಷ್ಟ್ರೀಯ ಮಟ್ಟದಲ್ಲಿ ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವುದಕ್ಕೆ, ಇದರಲ್ಲಿ ರಾಷ್ಟ್ರದ ಹಿತವಿದೆ ಎನ್ನುವುದಕ್ಕೋಸ್ಕರ ಆವತ್ತಿನ ಗಂಭಿರತೆ ಅರಿತುಕೊಂಡು, 98ರಲ್ಲಿ ಇದರ ಅನುಷ್ಠಾನ ಪ್ರಾರಂಭವಾಯಿತು. ಅಂದಿನಿಂದ ನಮ್ಮ ಸಮಸ್ಯೆಗಳು ಇಂದಿನವರೆಗೂ ಮುಂದುವರಿದಿದೆ. 86 ರಿಂದ 98 ರ ತನಕ ಒಂದು ರೀತಿಯ ಸಮಸ್ಯೆಗಳು. 98 ರಿಂದ ಇಂದಿನವರೆಗೆ ಇರುವ ಸಮಸ್ಯೆಗಳು ಇನ್ನೊಂದು ರೀತಿ. ಈಗ 98 ರಲ್ಲಿ ಅನುಷ್ಠಾನದ ಕೆಲಸ ಪ್ರಾರಂಭಗೊಂಡು ನಂತರದಲ್ಲಿ ಅಲ್ಲಿರುವ ನಿರಾಶ್ರಿತರ ಕುಟುಂಬ 4,444 ಎಂದು 86ರಲ್ಲಿ ಗುರುತಿಸಲಾಗಿದೆ. ಅದರೆ, 98ರ ಅನುಷ್ಠಾನಗೊಳ್ಳುವಾಗ ಕುಟುಂಬಗಳ ಸಂಖ್ಯೆ ಹೆಚ್ಚಾಗಿತ್ತು. ಸಹಜವಾಗಿ ಇವತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಇದನ್ನು ನಾವು ಕಾಣುತ್ತಿದ್ದೇವೆ. ಕುಟುಂಬಗಳ ವ್ಯವಸ್ಥೆಗಳು ಹೆಚ್ಚಾಗಿವೆ. ಆದರೆ, ಅಂದಿನವರೆಗೆ ಸರ್ಕಾರಕ್ಕೆ ಆ ಕುಟುಂಬಗಳ ಸಂಖ್ಯೆ ಹೆಚ್ಚಾಗಿರುವುದನ್ನು ಪರಿಗಣಿಸಲು